ಕರ್ನಾಟಕ ಸರ್ಕಾರ

## ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ,
ಬೆಂಗಳೂರು–560001

ಸಂಖ್ಯೆ : ಸಿ4(6) ಶಿ.ಸೇ.ವಿ.ಪ್ರ/01/19-20 ದಿನಾಂಕ : 06.08.2019

**–:ಸುತ್ತೋಲೆ:–**

**ವಿಷಯ : ಶಾಲಾ ಸೂಚನಾ ಫಲಕದಲ್ಲಿ ಶಿಕ್ಷಕರ ಸೇವಾ ವಿವರಗಳನ್ನು ಪ್ರಕಟಿಸುವಾಗ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ**

**ಉಲ್ಲೇಖ : ಅಧ್ಯಕ್ಷರು, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತ ಇವರ ಪತ್ರ ಸಂಖ್ಯೆ : ಕೆಎಸ್‌ಎಂಸಿ:ಸಿಹೆಚ್‌ಎಂ:2019/03, ದಿನಾಂಕ : 27.07.2019**

– – –

ಅಧ್ಯಕ್ಷರು, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತ ಆಯೋಗ ಇವರು ಇತ್ತೀಚೆಗೆ ಶಾಲೆಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಶಾಲೆಗಳ ಪ್ರಕಟಣಾ ಫಲಕದಲ್ಲಿ ಶಿಕ್ಷಕರ ಸೇವಾ ವಿವರಗಳನ್ನು ಪ್ರಕಟಿಸುವಾಗ ಶಿಕ್ಷಕರ ಸೇವಾ ವಿವರಗಳೊಂದಿಗೆ ಅವರ ಜಾತಿ, ಧರ್ಮದ ವಿವರಗಳನ್ನು ಸಹ ನಮೂದಿಸಿ ಪ್ರಕಟಿಸುತ್ತಿರುವುದನ್ನು ಗಮನಿಸಿದ್ದು, ಇದನ್ನು ಉಲ್ಲೇಖಿತ ಪತ್ರದ ಮೂಲಕ ಇಲಾಖೆಯ ಗಮನಕ್ಕೆ ತಂದಿರುತ್ತಾರೆ.

ಆದುದರಿಂದ, ರಾಜ್ಯದ ಎಲ್ಲಾ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಪ್ರಕಟಣಾ ಫಲಕಗಳಲ್ಲಿ ಶಿಕ್ಷಕರ ಸೇವಾ ವಿವರಗಳನ್ನು ಪ್ರಕಟಿಸುವಾಗ ಶಿಕ್ಷಕರ ಹೆಸರು, ವಿದ್ಯಾರ್ಹತೆ, ಪದನಾಮ, ಸೇವೆಗೆ ಸೇರಿದ ದಿನಾಂಕ ಹಾಗೂ ಶೈಕ್ಷಣಿಕ ಉದ್ದೇಶಕ್ಕಾಗಿ ಅಗತ್ಯವಿರುವ ಮಾಹಿತಿಗಳನ್ನು ಹೊರತುಪಡಿಸಿ, ಯಾವುದೇ ವೈಯಕ್ತಿಕ ವಿವರಗಳನ್ನು ಪ್ರಕಟಣಾ ಫಲಕದಲ್ಲಿ ಪ್ರಕಟಿಸುವುದನ್ನು ಕಡ್ಡಾಯವಾಗಿ ನಿಷೇಧಿಸಿದೆ.

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ

1) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ / ಗುಲ್ಬರ್ಗಾ
2) ನಿರ್ದೇಶಕರು (ಪ್ರೌಢ) / (ಪ್ರಾಥಮಿಕ), ಆಯುಕ್ತರ ಕಛೇರಿ, ಬೆಂಗಳೂರು, ಇವರಿಗೆ ಸೂಕ್ತ ಕ್ರಮಕ್ಕಾಗಿ
3) ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ), ಸಾ ಶಿ ಇ, ಅಗತ್ಯ ಕ್ರಮಕ್ಕಾಗಿ.
4) ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾ ಶಿ ಇ, ಇವರಿಗೆ ಕಳುಹಿಸುತ್ತಾ ತಮ್ಮ ವ್ಯಾಪ್ತಿಗೆ ಬರುವ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಮುಖ್ಯೋಪಾಧ್ಯಾಯರಿಗೆ ಕಳುಹಿಸುವುದು.

**ಪ್ರತಿಯನ್ನು ಗೌರವಪೂರ್ವಕವಾಗಿ ಸಲ್ಲಿಸಿದೆ :**

1) ಅಧ್ಯಕ್ಷರು, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ, ಬೆಂಗಳೂರು.